15 ನೇ ಸಭೆ ನಿ: 330
05

# ಕರ್ನಾಟಕ ವಿಧಾನ ಪರಿಷತ್ತು

## ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಸಿ. ಎನ್. ಮಂಜೇಗೌಡ ಇವರು ನಿಯಮ 330ರಡಿ ಪ್ರಸ್ತಾಪಿಸಿರುವ ಗಮನ ಸೆಳೆಯುವ ಸೂಚನೆಗೆ ಮಾನ್ಯ ಕಂದಾಯ ಸಚಿವರ ಉತ್ತರ.

**ವಿಷಯ:-**

ಮೈಸೂರು, ಮಂಡ್ಯ ಹಾಗೂ ತುಮಕೂರು ಜಿಲ್ಲೆಗಳಲ್ಲಿನ ನೂರಾರು ರೈತರುಗಳು ಕಳೆದ 20 – 30 ವರ್ಷಗಳಿಂದ ಕೃಷಿ ಜಮೀನನ್ನು ನೋಂದಣಿ ಇಲಾಖೆಗೆ ಸ್ಟ್ಯಾಂಪ್ ಡ್ಯೂಟಿ ಪಾವತಿಸಿ ಕ್ರಯಕ್ಕೆ ಖರೀದಿಸಿ, ತಾವುಗಳೇ ಸ್ವಾಧೀನದಲ್ಲಿದ್ದಾಗ್ಯೂ ಕಂದಾಯ ಇಲಾಖೆಯ ಕೆಳಹಂತದ ನೌಕರುಗಳು ಸದರಿ ಮಾಲೀಕರುಗಳ ಹೆಸರಿಗೆ ಪಹಣಿ ನೀಡದಿರುವುದರಿಂದ ತುಂಬಾ ತೊಂದರೆಗೊಳಗಾಗಿ ಸರ್ಕಾರಿ ಸೌಲಭ್ಯಗಳಿಂದ ವಂಚಿತರಾಗಿರುತ್ತಾರೆ. ತಾಲ್ಲೂಕು ಕಛೇರಿ/ನಾಡ ಕಛೇರಿಗಳಲ್ಲಿ ನಶಿಸಿ ಹೋಗಿ ಲಭ್ಯವಿಲ್ಲದ ಮ್ಯೂಟೇಷನ್, ಖರೀದಿ ವರ್ಷಗಳ ಖಾತಾ ದೃಡೀಕೃತ ಪ್ರತಿ ನೀಡಿಲ್ಲವೆಂದು, ನ್ಯಾಯಾಲಯದಲ್ಲಿ ಪರಿಹರಿಸಿಕೊಳ್ಳಿ ಎಂದು ಆನೇಕ ರೈತರುಗಳಿಗೆ ಕೆಳಹಂತದ ಅಧಿಕಾರಿಗಳು ಆದೇಶ ಹೊರಡಿಸಿರುವುದು ನಮ್ಮ ಗಮನಕ್ಕೆ ಬಂದಿರುತ್ತದೆ. ಸರ್ಕಾರಿ ಇಲಾಖೆಗಳಲ್ಲಿ ದಾಖಲೆಗಳು ಕಳೆದು ಹೋಗಿರುವ ಅವುಗಳನ್ನು ರೈತರು ಅಧಿಕಾರಿಗಳಿಗೆ ನೀಡಲು ಹೇಗೆ ಸಾಧ್ಯವಾಗುತ್ತದೆ.

ಆದುದರಿಂದ, ಮೇಲ್ಕಂಡಂತೆ ಸಮಸ್ಯೆ ಇರುವ ರಾಜ್ಯದ ರೈತರುಗಳಿಗೆ ಕ್ರಯಪತ್ರ, ಸ್ವಾಧೀನಾನುಭವ, ಸ್ಥಳ ಪರಿಶೀಲನಾ ವರದಿ ಹಾಗೂ ಹಾಲಿ ಲಭ್ಯವಿರುವ ದಾಖಲೆಗಳ ಆಧಾರದ ಮೇಲೆ ಅವರ ಹೆಸರಿಗೆ ಕೂಡಲೇ ಪಹಣಿ ದಾಖಲಿಸುವಂತೆ ಸಂಬಂಧಿಸಿದ ಕೆಳಹಂತದ ಅಧಿಕಾರಿಗಳಿಗೆ ಸರ್ಕಾರದ ವತಿಯಿಂದ ಸೂಕ್ತ ನಿರ್ದೇಶನ ನೀಡಿ, ಈ ಜ್ವಲಂತ ಸಮಸ್ಯೆಯನ್ನು ನಿವಾರಿಸಿ ರೈತರಿಗೆ ಸಹಾಯ ಮಾಡಬೇಕೆಂದು ಕೋರುತ್ತೇನೆ.

**ಉತ್ತರ:**

ಸರ್ಕಾರದ ಸುತ್ತೋಲೆ ಸಂಖ್ಯೆ: RD 103 MRR 2002, ದಿನಾಂಕ: 29.12.2009 ಹಾಗೂ RD 99 MRR 2011, ದಿನಾಂಕ: 24.12.2011ರಂತೆ ಭೂಮಿ ಕೇಂದ್ರದ ತಂತ್ರಾಂಶದಲ್ಲಿ ಹಳೇ ಕ್ರಯ ಪತ್ರದಂತೆ ಖಾತೆ – ಪಹಣಿ ಬದಲಾವಣೆ ಮಾಡಲು ಅವಕಾಶ ಕಲ್ಪಿಸಲಾಗಿರುತ್ತದೆ. ಒಂದು ವೇಳೆ ಮಾರಾಟಗಾರರ ಹೆಸರಿನಲ್ಲಿ ಹಾಲಿ ಪಹಣಿ ನಮೂದಿಲ್ಲದಿದ್ದಲ್ಲಿ ಅಂತಹ ಪ್ರಕರಣಗಳಲ್ಲಿ ಉಪವಿಭಾಗಾಧಿಕಾರಿಯವರ ನ್ಯಾಯಾಲಯದಲ್ಲಿ ಮೇಲ್ಮನವಿ ಪ್ರಕರಣ ದಾಖಲಿಸಿಕೊಂಡು ಸದರಿ ಆದೇಶದನ್ವಯ ತಹಶೀಲ್ದಾರ್‌ರವರು ಕ್ರಮವಹಿಸುತ್ತಿರುತ್ತಾರೆ.

ಮುಂದುವರೆದು, ನೋಂದಣಿಯಾದ ದಸ್ತಾವೇಜುಗಳು ಭೂಮಿ-ಕಾವೇರಿ ತಂತ್ರಾಂಶದ ಮೂಲಕ ವಿದ್ಯುನ್ಮಾನ ರೀತಿಯಲ್ಲಿ ಭೂಮಿ ಕೇಂದ್ರಕ್ಕೆ ರವಾನೆಯಾಗುತ್ತಿದ್ದು, ಸರ್ಕಾರದ ಅಧಿಸೂಚನೆ ಸಂಖ್ಯೆ: RD 26 LGP 2022, ದಿನಾಂಕ: 29.09.2022ರಂತೆ ನೋಂದಣಿ ದಾಸ್ತಾವೇಜಿನಂತೆ ಖಾತೆ ಪಹಣಿ ಬದಲಾವಣೆಗೆ ಸೂಚನಾ ಅವಧಿಯನ್ನು 07 ದಿನಗಳಿಗೆ ನಿಗಧಿಪಡಿಸಿದ್ದು, ಅದರಂತೆ ನಿಗಧಿಪಡಿಸಿದ ಕಾಲಾವಧಿಯಲ್ಲಿ ಖಾತೆ – ಪಹಣಿಗೆ ಕ್ರಮವಹಿಸಲಾಗುತ್ತದೆ.

ಪ್ರಸ್ತುತ ಭೂ ಸುರಕ್ಷಾ ಯೋಜನೆಯನ್ನು ಸರ್ಕಾರವು ಜಾರಿಗೆ ತಂದಿರುವುದರಿಂದ ಅಭಿಲೇಖಾಲಯ ಶಾಖೆಯಲ್ಲಿ ಲಭ್ಯವಿರುವ ಎಲ್ಲಾ ದಾಖಲಾತಿಗಳನ್ನು ಸ್ಕ್ಯಾನ್ ಮಾಡಿ ತಂತ್ರಾಂಶಕ್ಕೆ ಅಳವಡಿಸಲಾಗುತ್ತಿದೆ.

**ಕಂಇ 83 ಟಿಆರ್‌ಎಂ 2025**

**(ಕೃಷ್ಣ ಬೈರೇಗೌಡ)**
**ಕಂದಾಯ ಸಚಿವರು**